# ಇನ್‌ಸ್ಟಾಗ್ರಾಂ ಡೆಸ್ಕ್‌ಟಾಪ್ ಫೋಟೊ ಪೋಸ್ಟ್ ಹೇಗೆ?

ವಾಟ್ಸ್‌ಆ್ಯಪ್ ಡೆಸ್ಕ್‌ಟಾಪ್‌ನಂತೆಯೇ ಈಗ ಇನ್‌ಸ್ಟಾಗ್ರಾಂನ 'ಡೆಸ್ಕ್‌ಟಾಪ್' ಆಯ್ಕೆ ಬಳಕೆದಾರರಿಗೆ ಲಭ್ಯ. ಈ ಮೂಲಕ ಇನ್‌ಸ್ಟಾಗ್ರಾಂ ಮತ್ತಷ್ಟು ಬಳಕೆದಾರರ ಸ್ನೇಹಿಯಾಗಿದೆ.

■ ಶಶಿಕುಮಾರ್ ಸಿ.

ಫೋಟೊ ಹಾಗೂ ವಿಡಿಯೊಗಳನ್ನು ಪೋಸ್ಟ್ ಮಾಡುವ ವಿಚಾರವಾಗಿ ಹೆಚ್ಚು ಖ್ಯಾತಿ ಗಳಿಸಿರುವ 'ಇನ್‌ಸ್ಟಾಗ್ರಾಂ' ಕೆಲವು ತಿಂಗಳುಗಳ ಹಿಂದೆಯೇ ವಾಟ್ಸ್‌ಆ್ಯಪ್ ಡೆಸ್ಕ್‌ಟಾಪ್‌ನಂತೆಯೇ 'ಇನ್‌ಸ್ಟಾಗ್ರಾಂ ಡೆಸ್ಕ್‌ಟಾಪ್' ಆಯ್ಕೆಯನ್ನು ಕಲ್ಪಿಸಿದೆ. ಆದರೆ ಇನ್‌ಸ್ಟಾಗ್ರಾಂ ಮೊಬೈಲ್ ವರ್ಶನ್ ಮೂಲಕ ನೇರವಾಗಿ ಫೋಟೊ ಅಪ್‌ಲೋಡ್ ಮಾಡುವಂತಹ ಆಯ್ಕೆಯು ಡೆಸ್ಕ್‌ಟಾಪ್ ವರ್ಶನ್‌ನಲ್ಲಿ ಇಷ್ಟು ದಿನ ಇರಲಿಲ್ಲ. ಕೇವಲ ನೋಡುವ ಆಯ್ಕೆ ಮಾತ್ರ ಇದರಲ್ಲಿ ಇತ್ತು.

ಈಗ ಈ ಆಯ್ಕೆಯನ್ನು ಇನ್‌ಸ್ಟಾಗ್ರಾಂ 'ಮ್ಯಾಕ್, ಲ್ಯಾಪ್‌ಟಾಪ್ ಹಾಗೂ ಕಂಪ್ಯೂಟರ್' ಮೂಲಕ ಇನ್‌ಸ್ಟಾಗ್ರಾಂ ಡೆಸ್ಕ್‌ಟಾಪ್ ವರ್ಶನ್ ಬಳಸುವ ಬಳಕೆದಾರರಿಗೆ ಕಲ್ಪಿಸಿದ್ದು, ಇನ್ನುಮುಂದೆ, ಬಳಕೆದಾರರು ನೇರವಾಗಿ ಫೋಟೊ ಮತ್ತು ವಿಡಿಯೊಗಳನ್ನು ಅಪ್‌ಲೋಡ್ ಮಾಡುವ ಆಯ್ಕೆಯನ್ನು ಡೆಸ್ಕ್‌ಟಾಪ್ ವರ್ಶನ್‌ನಲ್ಲಿ ಪಡೆಯುತ್ತಾರೆ. ಸದ್ಯ ಇನ್‌ಸ್ಟಾಗ್ರಾಂ ಬೀಟಾ ವರ್ಶನ್ ಬಳಕೆದಾರರಿಗೆ ಮಾತ್ರ ಲಭ್ಯವಿದ್ದು, ಕೆಲ ದಿನಗಳಲ್ಲೇ ಎಲ್ಲ ಬಳಕೆದಾರರಿಗೂ ಈ ಆಯ್ಕೆಯು ಲಭ್ಯವಾಗಲಿದೆ.




## ಪೋಸ್ಟ್ ಹೇಗೆ?

ಬಳಕೆದಾರರು ಮೊದಲು ತಮ್ಮ ಮ್ಯಾಕ್, ಲ್ಯಾಪ್‌ಟಾಪ್ ಅಥವಾ ಕಂಪ್ಯೂಟರ್‌ನಲ್ಲಿ ಇನ್‌ಸ್ಟಾಗ್ರಾಂ ಡೆಸ್ಕ್‌ಟಾಪ್ ವರ್ಶನ್ ತೆರೆಯಬೇಕು. ಬಳಿಕ ವೆಬ್‌ಸೈಟ್‌ನ ಮೇಲ್ಭಾಗದಲ್ಲಿ ಕಾಣುವ ಪ್ಲಸ್ (+) ಚಿಹ್ನೆಯನ್ನು ಕ್ಲಿಕ್ ಮಾಡಬೇಕು. ಆ್ಯಂಡ್ರಾಯ್ಡ್ ಮತ್ತು ಐಒಎಸ್ ಅಪ್ಲಿಕೇಷನ್‌ಗಳಲ್ಲಿ ಮಾಡುವಂತೆಯೇ ಅವರು ತಮ್ಮ ಮ್ಯಾಕ್ ಅಥವಾ ವಿಂಡೋಸ್ ಪಿಸಿಗಳಿಂದ ಚಿತ್ರವನ್ನು ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ಆಯ್ಕೆ ಮಾಡಿದ ನಂತರ ಕಾಣುವ ನಾಲ್ಕು ವಿಭಿನ್ನ ಮಾದರಿಯ ಚಿತ್ರದ ವಿನ್ಯಾಸವನ್ನು ಕ್ರಾಪ್ ಮಾಡುವ ಮೂಲಕ ಆರಿಸಬೇಕು. ಬಳಿಕ, ಲಭ್ಯವಿರುವ ವಿವಿಧ ಆಯ್ಕೆಗಳನ್ನು ಬಳಸಿಕೊಂಡು ಚಿತ್ರವನ್ನು ಎಡಿಟ್ ಮಾಡಿ ಪಬ್ಲೀಷ್ ಆಯ್ಕೆಯನ್ನು ಕ್ಲಿಕ್ಕಿಸಿದರೆ ಫೋಟೊ ಪೋಸ್ಟ್ ಆಗುತ್ತದೆ.

'ಇನ್‌ಸ್ಟಾಗ್ರಾಂ ಡೆಸ್ಕ್‌ಟಾಪ್'ನಲ್ಲಿ ಫೋಟೊ ಹಾಗೂ ವಿಡಿಯೊ ಪೋಸ್ಟ್ ಮಾಡುವ ವಿಧಾನಗಳೆರಡೂ ಒಂದೇ ರೀತಿ ಇರುವುದಿಲ್ಲ. ಪೋಸ್ಟ್ ಮಾಡಲು ಬಯಸಿದ ವಿಡಿಯೊವನ್ನು ಆಯ್ಕೆ ಮಾಡಿದ ಬಳಿಕ ಬಳಕೆದಾರರು ವಿಡಿಯೊದಿಂದ ಯಾವುದೇ ಫ್ರೇಮ್ ಅನ್ನು ಕವರ್ ಆಗಿಯೂ ಆಯ್ಕೆ ಮಾಡಬಹುದು.

ಬಳಕೆದಾರರು ಧ್ವನಿಯನ್ನು ಆಫ್ ಮಾಡಲು ಅಥವಾ ಆನ್ ಮಾಡಲು ಟಾಗಲ್ ಸಹ ಮಾಡಬಹುದು. ಬಳಕೆದಾರರು ತಮ್ಮ ಫೋಟೋಗಳು ಅಥವಾ ವಿಡಿಯೊಗಳನ್ನು ಸಂಪಾದಿಸುವುದನ್ನು ಪೂರ್ಣಗೊಳಿಸಿದ ನಂತರ, ಅವರು ಶೀರ್ಷಿಕೆ, ಸ್ಥಳ ಮತ್ತು ಪಠ್ಯವನ್ನು ಸೇರಿಸಬಹುದು. ಇತರ ಇನ್‌ಸ್ಟಾಗ್ರಾಮ್ ಬಳಕೆದಾರರನ್ನು ಫೋಟೊ ಕ್ಲಿಕ್ ಮಾಡುವ ಮೂಲಕ ಪೋಸ್ಟ್‌ಗಳಲ್ಲಿ ಟ್ಯಾಗ್ ಮಾಡಬಹುದು. ಬಳಕೆದಾರರು ತಮ್ಮ ಪೋಸ್ಟ್ ಅನ್ನು ಪ್ರಕಟಿಸುವ ಮೊದಲು ಅದನ್ನು ಕಾಮೆಂಟ್ ಮಾಡುವುದನ್ನು ಆಫ್ ಮಾಡುವ ಆಯ್ಕೆಯನ್ನು ಸಹ 'ಇನ್‌ಸ್ಟಾಗ್ರಾಂ ಡೆಸ್ಕ್‌ಟಾಪ್' ವರ್ಶನ್‌ನಲ್ಲಿ ಕಾಣಬಹುದು. ■

## ಫ್ಯಾಮಿಲಿ ಜೊತೆ ಗೂಗಲ್ ಒನ್!

ಫೋನ್‌ನಲ್ಲಿ ಸ್ಟೋರೇಜ್ ಸಾಮರ್ಥ್ಯ ಮುಗಿದ ಮೇಲೆ ಮುಂದೇನು ಎನ್ನುವ ಪ್ರಶ್ನೆಗೆ ಉತ್ತರ 'ಕ್ಲೌಡ್ ನೆಟ್‌ವರ್ಕ್'. ಅದರಲ್ಲೂ ಗೂಗಲ್ ಒನ್ ಕ್ಲೌಡ್ ಸ್ಟೋರೇಜ್ ಆ್ಯಪ್ ಅಂತೂ ಜನರಿಗೆ ಹೆಚ್ಚು ಆಪ್ತವಾಗಿದೆ.

15 ಜಿಬಿಗಿಂತಲೂ ಹೆಚ್ಚಿನ ಸ್ಟೋರೇಜ್ ಬಳಕೆಯ ಉಚಿತ ಸೇವೆಯನ್ನು ಈಚೆಗಷ್ಟೇ ಸ್ಥಗಿತಗೊಳಿಸಿದ ಗೂಗಲ್ ಒನ್, ತನ್ನ ಬಳಕೆದಾರರ ಅನುಕೂಲಕ್ಕೆಂದು ಫ್ಯಾಮಿಲಿ ಜೊತೆಗೆ ಸ್ಟೋರೇಜ್ ಹಂಚಿಕೊಳ್ಳುವ ಆಯ್ಕೆಯನ್ನು ಒದಗಿಸಿದೆ. ಬಳಕೆದಾರರು ತಮ್ಮ ಗೂಗಲ್ ಒನ್ ಖಾತೆಯ ಸ್ಟೋರೇಜ್ ಸ್ಪೇಸ್ ಅನ್ನು ತಮ್ಮ ಕುಟುಂಬಸ್ಥರೊಂದಿಗೆ ಹಂಚಿಕೊಳ್ಳಲು ಈ ಕೆಳಗಿನಂತೆ ಮಾಡಬಹುದು.

www.one.google.com ಲಿಂಕ್ ಅನ್ನು ಓಪನ್ ಮಾಡಿ

ಪರದೆಯ ಮೇಲೆ ಕಾಣುವ ಸೆಟ್ಟಿಂಗ್ಸ್‌ಗೆ ಹೋಗಿ 'ಮ್ಯಾನೇಜ್ ಫ್ಯಾಮಿಲಿ ಸೆಟ್ಟಿಂಗ್ಸ್' ಕ್ಲಿಕ್ಕಿಸಿ. ನಂತರ ಕಾಣುವ 'ಮ್ಯಾನೇಜ್' ಆಯ್ಕೆಯನ್ನು ಒತ್ತಿ.

'ಗೆಟ್ ಸ್ಟಾರ್ಟೆಡ್' ಆಯ್ಕೆಯನ್ನು ಕ್ಲಿಕ್ಕಿಸಿ. ಬಳಿಕ 'ಕ್ರಿಯೇಟ್ ಫ್ಯಾಮಿಲಿ ಗ್ರೂಪ್' ಒತ್ತುವ ಮೂಲ್ ಗ್ರೂಪ್ ಅನ್ನು ರಚಿಸಬೇಕು. ಆ ಗ್ರೂಪ್‌ಗೆ ಕುಟುಂಬದ ಸದಸ್ಯರ ಐಡಿಯನ್ನು ಸೇರಿಸಿ ಅವರೊಂದಿಗೆ 'ಗೂಗಲ್ ಒನ್' ಸ್ಪೇಸ್ ಶೇರ್ ಮಾಡಿ. ■